# ನಂದನ್‌ಕುಪ್ಪಳಿಯವರ ಭಾವರೇಖೆ:
# ಸ್ವಚ್ಛಂದ ಪ್ರೀತಿಗಾಗಿ ತುಡಿವ ಪರಿಶುದ್ಧ ಹೃದಯದ ಪಿಸುಮಾತು

**ಶಿವಲಿಂಗೇಗೌಡ ಡಿ.***

**DOI: https://doi.org/10.5281/zenodo.20106613**

**ABSTRACT**

ನಂದನ್ ಕುಪ್ಪಳಿಯವರ 'ಭಾವರೇಖೆ' ಕವನ ಸಂಕಲನವು ಪ್ರೀತಿ, ಪ್ರೇಮ ಮತ್ತು ವಿರಹಗಳ ಧ್ಯಾನದಲ್ಲಿ ಅರಳಿದ ಆಳವಾದ ಅರ್ಥವುಳ್ಳ ಹನಿಕವಿತೆಗಳ ಗುಚ್ಛವಾಗಿದೆ. ಕವಿಯ ಪ್ರೇಮವು ಕೇವಲ ಸ್ತ್ರೀ–ಪುರುಷರ ನಡುವಿನ ವ್ಯಕ್ತಿಗತ ನೆಲೆಯಲ್ಲಿ ನಿಲ್ಲದೆ, ತಾಯಿಪ್ರೀತಿ, ನಿಸರ್ಗಪ್ರೀತಿ ಹಾಗೂ ಬುದ್ಧನ ಜೀವಕಾರುಣ್ಯದಂತಹ ವಿಶ್ವಪ್ರೀತಿಯಾಗಿ ವಿಸ್ತಾರಗೊಳ್ಳುತ್ತದೆ. ಕವಿತೆಗಳಲ್ಲಿ ಪ್ರೀತಿಯನ್ನು 'ಬೆಳಕು' ಎಂಬ ಪರಿಣಾಮಕಾರಿ ಪ್ರತಿಮೆಯ ಮೂಲಕ ನಿರೂಪಿಸಲಾಗಿದ್ದು, ಅದು ಮನಸ್ಸಿನ ಕತ್ತಲನ್ನು ದೂರಮಾಡಿ, ಜಗತ್ತನ್ನು ಬೆಳಗುವ ಶಕ್ತಿಯಾಗಿ ಚಿತ್ರಿತವಾಗಿದೆ. ದ್ವೇಷ, ನೋವು, ವಿರಹ, ಹತಾಶೆಗಳನ್ನೂ ಪ್ರೀತಿಯಿಂದಲೇ ಸ್ವೀಕರಿಸುವ ಪರಿಶುದ್ಧ ಹೃದಯದ ಪಿಸುಮಾತುಗಳು ಇಲ್ಲಿವೆ. ಸರಳ ರಚನೆಯ ಈ ಹನಿಕವಿತೆಗಳು, ಮನುಷ್ಯನು ನಿಸರ್ಗದ ನಿರಂತರ ಚಲನೆಯ ಭಾಗವಾಗಿ ವಿಶ್ವಪ್ರೇಮವನ್ನು ಮೈಗೂಡಿಸಿಕೊಂಡು ಬದುಕುವ ಸಾರ್ಥಕತೆಯನ್ನು ಅತ್ಯಂತ ಮಾರ್ಮಿಕವಾಗಿ ಅಭಿವ್ಯಕ್ತಿಸುತ್ತವೆ.

**KEYWORDS:** ಭಾವರೇಖೆ, ನಂದನ್ ಕುಪ್ಪಳಿ, ಹನಿಕವಿತೆಗಳು, ವಿಶ್ವಪ್ರೀತಿ ಮತ್ತು ಜೀವಕಾರುಣ್ಯ, ಬೆಳಕಿನ ಪ್ರತಿಮೆ.

* **ಡಾ. ಶಿವಲಿಂಗೇಗೌಡ ಡಿ.**, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ, ಬೆಂಗಳೂರು ದಕ್ಷಿಣ.

ಈ ಕವನಸಂಕಲನದ ಕವಿತೆಗಳು ಪ್ರೀತಿಯ ಧ್ಯಾನದಲ್ಲಿ ಹುಟ್ಟಿದಂತವು. ಪ್ರೀತಿ, ಪ್ರೇಮ, ವಿರಹಗಳ ಸುತ್ತ ಹೆಣೆದಿರುವ ಈ ಕವಿತೆಗಳು ಪ್ರೀತಿಯ ಹುಡುಕಾಟದಲ್ಲಿ ತೊಡಗಿವೆ. ಪ್ರೀತಿಗಾಗಿ ಹಂಬಲಿಸುವ ಕನವರಿಸುವ, ಕಾತರಿಸುವ ಕವಿ ಎಲ್ಲದರಲ್ಲಿಯೂ ಪ್ರೀತಿಯನ್ನಲ್ಲದೆ ಬೇರೇನನ್ನೂ ಕಾಣಲಾರ. ಕೊನೆಗೆ ಪ್ರೀತಿಯನ್ನಲ್ಲದೆ ಬೇರೇನನ್ನೂ ನೀಡಲಾರ. ಮೇಲ್ನೋಟಕ್ಕೆ ಹೆಣ್ಣಿನ ಪ್ರೀತಿಯ ಹಂಬಲದಿಂದ ಹುಟ್ಟಿದ ಕವಿತೆಗಳಂತೆ ಕಂಡರೂ ಆ ಸೀಮಿತ ನೆಲೆಗೆ ನಿಲ್ಲದೆ ವಿಶ್ವಪ್ರೀತಿಯ ನೆಲೆಗೆ ವಿಸ್ತಾರಗೊಳ್ಳುವುದು ಇಲ್ಲಿನ ಕವಿತೆಗಳ ವಿಶೇಷ. ಕವಿಗೆ ಪ್ರೀತಿ ಎಂದರೆ 'ಬೆಳಕು'. ಆ ಬೆಳಕಿನ ಹುಡುಕಾಟ, ಜೀವಪ್ರೀತಿಯ ಹುಡುಕಾಟವೂ ಆಗಿದೆ. ತನ್ನ ಮನದ ಕತ್ತಲನ್ನು ಬೆಳಗಿಸಿ, ವಿಶ್ವವನ್ನು ಪರಿಶುದ್ಧ ಹೃದಯದಿಂದ ಅಪ್ಪಿಕೊಳ್ಳುವಂತೆ ಮಾಡುವ ಆ ಪ್ರೀತಿಯ ಬೆಳಕಿಗಾಗಿ ನಿರಂತರ ಧ್ಯಾನಸ್ಥನಾಗಿದ್ದಾನೆ. ಪ್ರತಿ ಹೃದಯದಲ್ಲೂ ಈ ಪ್ರೀತಿಯ ಬೆಳಕನ್ನು ಕಾಣುವ, ಬೆಳಗಿಸುವ ಹಂಬಲ ಇಲ್ಲಿನ ಕವಿತೆಗಳಲ್ಲಿದೆ.

**"ಬೆಳದಿಂಗಳ ಹೊಳೆಯಲಿ**
**ನಾವಿಬ್ಬರೂ**
**ಮೀಯಬೇಕು**
**ಪ್ರೇಮ**
**ಬೆಳಗುವವರೆಗೆ....!!"**

**"ಕತ್ತಲೆಗೂ ಬೇಸರ**
**ಬೆಳಕಾಗಿ**
**ಬಳಿ ನೀನಿರಲು"**

**"ಬೆಳಗಿಬಿಡು**
**ನನ್ನೊಳಗೆ ನೀನು**
**ಆ ಬೆಳಕಿಂದ**
**ಜಗವೆಲ್ಲ ನೋಡುವೆನು**
**ನಾನು."**

ಇಲ್ಲಿನ ಕವಿತೆಗಳಲ್ಲಿ ಬೆಳಕಿನ ಪ್ರತಿಮೆಗಳು ಮೇಲಿಂದ ಮೇಲೆ ಬಂದು ಕವಿತೆಯ ಅರ್ಥವಂತಿಕೆಯನ್ನು ಹೆಚ್ಚಿಸಿವೆ. ಪ್ರೀತಿ, ಪ್ರೇಮಗಳು ಪ್ರತಿ ಹೃದಯವನ್ನೂ, ಜಗವನ್ನೂ ಬೆಳಗುವ ಬೆಳಕಾಗಬೇಕು. ಪ್ರೀತಿ ಬೆಳಗದಿದ್ದರೆ ಅದು ಪ್ರೀತಿಯಲ್ಲ. ಪ್ರೀತಿಯ ನೀಡಿಕೆ ಮತ್ತು ಪಡೆಯುವಿಕೆ ಎರಡರಲ್ಲೂ ಬೆಳಗುವ ಜೀವಪ್ರೀತಿಯಿರಬೇಕು ಎಂಬುದನ್ನು ಈ ಕವಿತೆಗಳು ಧ್ವನಿಸುತ್ತವೆ.

ಈ ಸಂಕಲನದ ಎಲ್ಲ ಕವಿತೆಗಳೂ ಹನಿಕವಿತೆಗಳೇ. ನೋಡಲು ಕೆಲವೇ ಪದಗಳ ಪುಟ್ಟ ಕವಿತೆಯ ಹಾಗೆ ಹಾಗೂ ಸರಳ ರಚನೆಯಂತೆ ಕಂಡರೂ ಅವುಗಳು

ಧ್ವನಿಸುವ ಅರ್ಥ, ನೀಡುವ ಅನುಭವ, ಉಂಟು ಮಾಡುವ ಅನುಭಾವಿಕ ಪರಿಣಾಮ ಅಗಾಧವಾದುದು.

**“ಪ್ರೇಮವಿಲ್ಲದೆ ಒಣಗಿದ**
**ಚಾರುವಿನ ಎದೆ**
**ಒಣಗಿದ ಹುಲ್ಲುಗಾವಲು**
**ಕಾಮ**
**ಎದೆಯ ಮೇಲಿನ ಬೆಂಕಿ”**

**“ಇಳಿದುಬಿಡು**
**ಎದೆಯೊಳಗೆ**
**ಮಣ್ಣಿಗೆ ನೀರು ಬಿದ್ದಂತೆ**
**ಚಿಮ್ಮುವುದು**
**ಜೀವ**
**ಪ್ರೇಮವಾಗಿ”**

ಈ ಕವಿತೆಗಳು ತಮ್ಮೊಳಗೆ ಅಗಾಧ ಅರ್ಥಗಳನ್ನು ಹುದುಗಿಸಿಕೊಂಡಿವೆ. ಬಿಚ್ಚಿದಷ್ಟು ಅರ್ಥದ ನೂಲುಗಳನ್ನು ಬಿಟ್ಟುಕೊಡುವ ರೇಷ್ಮೆಯ ಗೂಡಂತೆ.

ಮೇಲ್ನೋಟಕ್ಕೆ ಹೆಣ್ಣಿನ ಪ್ರೀತಿಯ ಸುಳಿಯಲ್ಲಿ ಸಿಕ್ಕು, ವಿರಹದಲ್ಲಿ ಬೆಂದು ಹುಟ್ಟಿದ ಕವಿತೆಗಳ ಹಾಗೆ ಕಂಡರೂ ಇಲ್ಲಿನ ಕವಿತೆಗಳು ಅಷ್ಟಕ್ಕೇ ಸೀಮಿತಗೊಳ್ಳುವುದಿಲ್ಲ. ಆ ಪ್ರೀತಿ ತಾಯಿಪ್ರೀತಿಯಾಗಿ, ಜೀವಪ್ರೀತಿಯಾಗಿ, ವಿಶ್ವಪ್ರೀತಿಯಾಗಿ, ನಿಸರ್ಗಪ್ರೀತಿಯಾಗಿ, ಬುದ್ಧಪ್ರೀತಿಯಾಗಿ ವಿಸ್ತಾರತೆಯನ್ನು ಪಡೆಯುತ್ತವೆ.

**“ಅವಳು ಹೆರುವಾಗ**
**ನಕ್ಕಿದ್ದಳಂತೆ**
**ನೋವಿನಲಿ**
**ನಾನು**
**ಮೊದಲ ಸಲ**
**ಅತ್ತಿದ್ದಕ್ಕೆ .”**

**“ಬುದ್ಧನಂತೆ ಪ್ರೇಮಕ್ಕಾಗಿ**
**ಧ್ಯಾನಿಸುವ**
**ಪ್ರತಿಯೊಂದು ಜೀವದ**
**ಕಣ್ಣುಗಳಲ್ಲೂ**
**ಬೆಳಕು**
**ಪ್ರಜ್ವಲಿಸುತ್ತಿದೆ”.**

ತಾಯಿಯ ನೋವಲ್ಲಿ, ತಂದೆಯ ಬೆವರಲ್ಲಿ, ಬರಡು ನೆಲದಲ್ಲಿ ಹಸಿರು ಚಿಮ್ಮುವಲ್ಲಿ, ಬುದ್ಧನ ಧ್ಯಾನದಲ್ಲಿ, ಪ್ರೇಯಸಿಯ ಕಣ್ಣಲ್ಲಿ ಹೀಗೆ ಎಲ್ಲದರಲ್ಲಿಯೂ ಪ್ರೇಮವನ್ನೇ ಕಾಣುವ ಕಾಣ್ಕೆ ಇಲ್ಲಿನ ಕವಿತೆಗಳಲ್ಲಿದೆ.

**“ನಿನ್ನೊಳಗೆ ಮತ್ತೆ ಮತ್ತೆ**
**ನನ್ನನ್ನು ಸಾಯಿಸುತ್ತಿದ್ದೀಯ**
**ಎನ್ನುವುದಾದರೆ ಅದೆಷ್ಟೋ**
**ನನ್ನ**
**ಹೊಸಹುಟ್ಟಿಗೆ**
**ಕಾರಣ ನೀನೆ”**

ವಿರಹ, ನೋವು, ಹತಾಶೆ, ದುಃಖ, ತಿರಸ್ಕಾರ, ಅವಮಾನಗಳ ಅನುಭವಗಳನ್ನೂ ಪ್ರೀತಿಯಾಗಿ, ಪ್ರೇಮವಾಗಿ ಭಾವಿಸುವ, ಬೆಳಕಾಗಿ ಪರಿವರ್ತಿಸಿಕೊಳ್ಳುವ, ಪ್ರತಿಯಾಗಿ ಪ್ರೀತಿಯನ್ನೇ ನೀಡುವ ಪರಿಶುದ್ಧ ಹೃದಯದ ಧ್ಯಾನದ ಪಿಸುಮಾತುಗಳ ಹಾಗೆ ಕೇಳಿಸುತ್ತವೆ ಇಲ್ಲಿನ ಹನಿಕವಿತೆಗಳು.

**“ನಿನ್ನನ್ನು ದ್ವೇಷಿಸಲು**
**ಸಾಧ್ಯವಿಲ್ಲ**
**ಹಾಗಾಗಿ ಪ್ರೀತಿಸುತ್ತೇನೆ”**

ಪ್ರೀತಿಯ ಧ್ಯಾನದಲ್ಲಿ ದ್ವೇಷಕ್ಕೆ ನೆಲೆಯಿಲ್ಲ. ದ್ವೇಷವನ್ನೂ ಪ್ರೀತಿಯಾಗೇ ಭಾವಿಸುವ ವಿಶಾಲ ಹೃದಯವಿದೆ. ಈ ಹನಿಕವಿತೆಗಳು ಬುದ್ಧಪ್ರೀತಿಯ ಬೆಳಕಲ್ಲಿ ಅರಳಿದಂತವು. ಬುದ್ಧನ ಜೀವಪ್ರೀತಿಯನ್ನು ಒಡಲಲ್ಲಿಟ್ಟುಕೊಂಡಂತವು. ಬುದ್ಧನ ಕಣ್ಣಿಂದ ಜಿನುಗಿದ ಆನಂದಭಾಷ್ಪದ ಹನಿಗಳಂತಿವೆ. ಪ್ರೀತಿಯನ್ನೇ ಉಸಿರಾಡಿ, ಪ್ರೀತಿಯನ್ನೇ ಲೋಕಕ್ಕೆ ಹಂಚುವ ಪ್ರೀತಿಯ ಕವಿತೆಗಳು ಇವು. ಹೊಸತನಕ್ಕಾಗಿ, ಮರುಹುಟ್ಟಿಗಾಗಿ ನಿರಂತರ ತುಡಿಯುವಿಕೆ ಇದೆ. ಎಲ್ಲಿಯೂ ನಿಲ್ಲದೆ, ಜಡವಾಗದೆ ನಿಸರ್ಗದಂತೆ ನಿತ್ಯ ಚಲನಶೀಲವಾಗಬಯಸುವ ಹಂಬಲವಿದೆ. ನಿತ್ಯ ಹೊಸತಾಗಿ, ಅನಂತತೆಯ ಕಡೆಗೆ ಚಲಿಸುವ ಬಯಕೆಯಿದೆ.

**“ಮರಳಿ**
**ಮೊಗ್ಗಾಗುವ ಬದಲು**
**ಅರಳಿ**
**ಬೀಜವಾಗು**
**ಸಾವಿರ ಮೊಗ್ಗುಗಳು**
**ನಿನ್ನೆದೆಯಲ್ಲಿ**
**ಅರಳಿ**
**ಸುಖಪಡುವವು”**

ಸೃಷ್ಟಿಯ ಅನಂತತೆ, ಅಗಾಧತೆ ಮತ್ತು ಜೀವಪ್ರೇಮದ ಅರಿವಿನೊಂದಿಗೆ ಕಾವ್ಯಾನುಸಂಧಾನ ನಡೆಸುವ ಕವಿ ಅದರ ಜೀವಕಾರುಣ್ಯದ ಗುಣಗಳನ್ನು ಮನುಷ್ಯನ ಹೃದಯದಲ್ಲಿ ಹುಡುಕಾಟ ನಡೆಸಿದ್ದಾನೆ. ನಿಸರ್ಗದ ಕೂಸಾದ ಮನುಷ್ಯ ಅದರ ವಿರುದ್ಧ ನಿಲ್ಲದೆ ಅದಕ್ಕೆ ಅಧೀನವಾಗಿ ಸಾಗಬೇಕಿದೆ. ತನ್ನೊಳಗೆ ನಿಸರ್ಗತನವನ್ನು ಕಾಪಿಟ್ಟುಕೊಂಡಷ್ಟೂ ದಿನ ಜೀವಂತವಾಗಿ, ಸಾರ್ಥಕವಾಗಿ ಬದುಕಿದಂತಾಗುತ್ತದೆ. ಬದುಕಿನ ಸಾರ್ಥಕ್ಯ ನಾವು ಬದುಕುವ ರೀತಿಯಲ್ಲಿರುತ್ತದೆ. ಬದುಕಿನುದ್ದಕ್ಕೂ ಪ್ರೀತಿಯನ್ನು ಕೊಟ್ಟು, ಪ್ರೀತಿಯನ್ನು ಪಡೆದು, ಪ್ರೀತಿಯನ್ನು ಬೆಳೆಯುವುದರಲ್ಲಿರುತ್ತದೆ. ಮೊಗ್ಗಾಗುವಿಕೆ, ಅರಳುವಿಕೆ, ಬೀಜವಾಗುವಿಕೆ ಇವು ಸೃಷ್ಟಿಯ ನಿರಂತರ ಪ್ರಕ್ರಿಯೆಗಳು. ಆದರೆ ಮನುಷ್ಯ ಮಾತ್ರ ಇದಕ್ಕೆ ವಿರುದ್ಧವಾಗಿ ಬದುಕುತ್ತಿದ್ದಾನೆ. ಬದುಕಿನ ಸಂಭ್ರಮವಿರುವುದು ನಿಸರ್ಗದ ನಿರಂತರ ಚಲನೆಯ ಭಾಗವಾಗಿ ಬದುಕುವುದರಲ್ಲಿ. ಬೀಜದ ಎದೆಯಲ್ಲಿ ಅನಂತ ಮೊಗ್ಗುಗಳು ಅರಳಿ ಸುಖಿಸುವ ಜೀವಕಾರುಣ್ಯದ ನೆಲೆ ಮನುಷ್ಯನ ಹೃದಯವಾಗಬೇಕೆಂಬ ತುಡಿತ ಎಲ್ಲ ಕವಿತೆಗಳ ಆಂತರ್ಯದಲ್ಲಿದೆ.

ಇಷ್ಟಾದರೂ ಇಲ್ಲಿನ ಕವಿತೆಗಳು ಇನ್ನೂ ಕವಿತ್ವವನ್ನು ಸಾಧಿಸಬೇಕಿದೆ. ಕವಿತೆಗಿರಬೇಕಾದ ರೂಪಕಶಕ್ತಿ, ಅರ್ಥದ ಸಂಗ್ರಹಗುಣ, ಶಬ್ದಗಳ ಜಾಣ್ಮೆಯ ಬಳಕೆ, ಅನಂತ ಅರ್ಥ ಸಾಧ್ಯತೆಯನ್ನು ಸಾಧಿಸಬೇಕಿದೆ. ಅದು ಮುಂದೆ ಸಾಧ್ಯವಾಗುವ ಎಲ್ಲ ಲಕ್ಷಣಗಳು ಈ ಸಂಕಲನದಲ್ಲಿಯೇ ಗೋಚರಿಸುತ್ತಿವೆ. ವೈಯಕ್ತಿಕ ನೆಲೆಯಲ್ಲಿ ನಿಲ್ಲಬಹುದಾಗಿದ್ದ ಪ್ರೀತಿ–ಪ್ರೇಮಗಳನ್ನು ವಿಶ್ವಪ್ರೇಮದ ನೆಲೆಯಲ್ಲಿ ಕಂಡು ಅನುಭವಿಸುವ ಕವಿಯ ತುಡಿತ ಇಲ್ಲಿ ಮುಖ್ಯ.

**ಪರಾಮರ್ಶನ ಗ್ರಂಥಗಳು:**

1. ನಂದನ್ ಕುಪ್ಪಳಿ, (2024), ಭಾವರೇಖೆ, ಶಿಕಾರಿಪುರ: ಸುವ್ವಿ ಪಬ್ಲಿಕೇಷನ್ಸ್.
2. ನಂದನ್ ಕುಪ್ಪಳಿ, (2025), ನೀಲಿಹೂವಿನ ನೆನಪುಗಳು, ಶಿಕಾರಿಪುರ: ಸುವ್ವಿ ಪಬ್ಲಿಕೇಷನ್ಸ್.
3. ಲಂಕೇಶ್ ಪಿ., (2010), ನೀಲುಕಾವ್ಯ ಸಂಗ್ರಹ – 1, 2, 3, ಬೆಂಗಳೂರು: ಲಂಕೇಶ್ ಪ್ರಕಾಶನ.